ಅಧ್ಯಕ್ಷರು : ಪ್ರಶ್ನೆ ಸಂಖ್ಯೆ : 131 (658)ನ್ನು ತಡೆಹಿಡಿಯಲಾಗಿದೆ.

**ವಿಷಯ : ರಾಜ್ಯದಲ್ಲಿ ಇತ್ತೀಚೆಗೆ ನೆರೆ ಹಾವಳಿಯಿಂದ ನಷ್ಟ ಹಾಗೂ ಪರಿಹಾರ.**

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 132 (615)

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಇತ್ತೀಚಿನ ನೆರೆ ಹಾವಳಿಯಿಂದ ಆಗಿರುವ ನಷ್ಟ ಏಷ್ಟು? ಸರಕಾರ ಇದುವರೆಗೂ ಪರಿಹಾರಕ್ಕಾಗಿ ಬಿಡುಗಡೆ ಮಾಡಿರುವ ಹಣ ಎಷ್ಟು?

ಆ) ಕೇಂದ್ರ ಸರ್ಕಾರದಿಂದ ಇದುವರೆಗೆ ಪರಿಹಾರವಾಗಿ ಎಷ್ಟು ಹಣ ಬಂದಿದೆ?

ಶ್ರೀ ಧರ್ಮಸಿಂಗ್ (ಕಂದಾಯ ಸಚಿವರು) :

ಅ) (ಲಕ್ಷ ರೂ.ಗಳಲ್ಲಿ)

ರಾಜ್ಯದಲ್ಲಿ ನೆರೆ ಹಾವಳಿಯಿಂದ ಆಗಿರುವ ಅಂದಾಜು ನಷ್ಟ : 16646.76

ನೆರೆ ಪರಿಹಾರ ಕಾರ್ಯಗಳಿಗೆ ಬಿಡುಗಡೆ ಮಾಡಿರುವ ಹಣ : 1190.00

ಆ) ಕೇಂದ್ರ ಸರ್ಕಾರವು, ರಾಜ್ಯ ಪ್ರಕೃತಿ ವಿಕೋಪ ಪರಿಹಾರ ನಿಧಿಗೆ ನೀಡಬೇಕಾಗಿರುವ ವಾರ್ಷಿಕ ವಂತಿಗೆ ರೂ. 20.25 ಕೋಟಿಗಳನ್ನು ಬಿಡುಗಡೆ ಮಾಡಿದೆ.

ಅಲ್ಲದೆ, ಮಾನ್ಯ ಪ್ರಧಾನ ಮಂತ್ರಿಯವರ ಪರಿಹಾರ ನಿಧಿಯಿಂದ ನೆರೆ ಹಾವಳಿಯಿಂದ ಮೃತಪಟ್ಟ ಪ್ರತಿ ವ್ಯಕ್ತಿಗೆ ರೂ. 50,000/- ಗಳಂತೆ ಅವರ ಕುಟುಂಬದವರಿಗೆ ಅನುಕಂಪ ಭತ್ಯೆ ನೀಡಲು ರೂ. 32.00 ಲಕ್ಷಗಳು ಮಂಜೂರಾಗಿರುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ ಇದರ ಬಗ್ಗೆ ಬಹಳ ವಿಫಲವಾದಂಥಹ ಚರ್ಚೆ ನಡೆದಿದೆ. ಅನೇಕ ಸಾರಿ ಉತ್ತರವನ್ನು ಸಹ ಕೊಟ್ಟಿದ್ದಾರೆ, ಎರಡು ಪ್ರಮುಖವಾದ ಪ್ರಶ್ನೆಗಳನ್ನು ನಾವು ಕೇಳಬೇಕಾಗಿದೆ. ನಿನ್ನೆಯೂ ಕೂಡ ಮಾನ್ಯ ಮುಖ್ಯಮಂತ್ರಿಗಳು ಬಂದಾಗ ಪ್ರಶ್ನೆ ಪ್ರಾರಂಭ ಆಯಿತು ಪ್ರಧಾನ ಮಂತ್ರಿಗಳು ಬೆಂಗಳೂರಿಗೆ ಬಂದಿದ್ದಾಗ ವಿಮಾನ ನಿಲ್ದಾಣದಲ್ಲಿ ನೆರೆಹಾವಳಿ ಕರ್ನಾಟಕ ರಾಜ್ಯದಲ್ಲಿ ಇದೆ ಎನ್ನುವುದು ನನಗೆ ಗೊತ್ತಿಲ್ಲ ಎಂದು ಹೇಳಿದ್ದಾರೆ ಎಂದು ಪತ್ರಿಕೆಗಳಲ್ಲಿ ಬಂತು. ಕರ್ನಾಟಕದಲ್ಲಿ ಬರ ಬಂದಿದೆ ಎನ್ನತಕ್ಕಂಥಾದ್ದು ನನ್ನ ಗಮನಕ್ಕೆ ಬಂದಿಲ್ಲ ಎನ್ನತಕ್ಕಂಥ ಮಾತನ್ನು ಪ್ರಧಾನ ಮಂತ್ರಿಗಳು ಹೇಳಿದ್ದಾರೆ ಎನ್ನತಕ್ಕಂಥಾದ್ದು ಬಂದಿದೆ. ಮತ್ತು ಈ ಮಾತಿಗೆ ತಮ್ಮ ಉತ್ತರ ಏನು? ತಾವು ಏನು ಮನವಿಯನ್ನು ಕೊಟ್ಟಿದ್ದೀರಿ? ಇದಕ್ಕೆ ಅಂತಿಮವಾಗಿ ಅವರ ಭರವಸೆ ಏನು? ಆ ಭರವಸೆ ರೂಪದಲ್ಲಿಯೇ ಇದೆಯೇ? ಪ್ರಾಮಾಣಿಕವಾಗಿ ಕೇಂದ್ರದಿಂದ ಪ್ರಧಾನ ಮಂತ್ರಿಗಳಿಂದ ನಮ್ಮ ರಾಜ್ಯಕ್ಕೆ ಏನು ಅನುಕೂಲವಾಗುತ್ತದೆ ಎನ್ನುವುದನ್ನು ಸ್ಪಷ್ಟವಾಗಿ ಹೇಳಬೇಕು ಎಂದು ತಮ್ಮಲ್ಲಿ ನಾನು ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಧರ್ಮಸಿಂಗ್ : ಮಾನ್ಯ ಅಧ್ಯಕ್ಷರೇ ಪ್ರಧಾನ ಮಂತ್ರಿಯವರು ಬೆಂಗಳೂರಿನಲ್ಲಿ ವಿಮಾನ ನಿಲ್ದಾಣದಲ್ಲಿ ಪತ್ರಕರ್ತರ ಪ್ರಶ್ನೆಗಳಿಗೆ ಉತ್ತರ ಹೇಳಿದ್ದಾರೆ. ಪ್ರವಾಹ ಇದೆ ನೆರೆ ಹಾವಳಿ ಇದೆ. ಅದು ನನ್ನ ಗಮನಕ್ಕೆ ಬಂದಿಲ್ಲ ಎನ್ನತಕ್ಕಂಥ ವಿಷಯವನ್ನು ತಾವು ಪ್ರಸ್ತಾಪ ಮಾಡುತ್ತಿದ್ದೀರಿ. ಅಲ್ಲಿ ಪತ್ರಕರ್ತ ಮಿತ್ರರು ಕೂಡ ನನಗೆ ಹೇಳಿದರು. ಅವರಿಗೆ ಫ್ಲಡ್ಸ್, ರಾಜಸ್ತಾನದಲ್ಲಿ ಗುಜರಾತಿನಲ್ಲಿಬೇರೆ ಕಡೆ ಆಗತಕ್ಕಂಥ ರೀತಿಯಲ್ಲಿ ಕರ್ನಾಟಕದಲ್ಲಿ ಮೊದಲು ಸಂಭವಿಸಿದುದ್ದು ಪ್ರವಾಹ ನೆರೆ ಹಾವಳಿ ಎನ್ನತಕ್ಕಂಥಾದ್ದು ಗುರುತು ಇತ್ತು ತದನಂತರ ಸಾರ್ವಜನಿಕರ ಸಭೆಯಲ್ಲಿ ನೆರೆ ಹಾವಳಿ ಮತ್ತು ಬರಗಾಲ ಎನ್ನತಕ್ಕಂಥಾದ್ದು ಅವರು ಸ್ಪಷ್ಟವಾಗಿ ಹೇಳಿದ್ದಾರೆ. ಮತ್ತು ಅವರು ಏನು ಹೇಳಿದ್ದಾರೆಂದರೆ ಮುಖ್ಯಮಂತ್ರಿಗಳು ಕೂಡ ಅವರ ಸ್ವಾಗತ ಭಾಷಣದಲ್ಲಿ ಇತ್ತೀಚಿನ ದಿವಸಗಳಲ್ಲಿ ನೆರೆ ಹಾವಳಿ ಮತ್ತು ಬರಗಾಲದಿಂದ ರಾಜ್ಯಕ್ಕೆ ತೊಂದರೆ ಆಗಿದೆ ಈಗಾಗಲೇ ನಾವು ಒಂದು ಮೇಮೋರ್ಯಾಂಡಂ ಕೂಡ ಕೊಟ್ಟಿದ್ದೇವೆ.

**12-10 ಪಿ.ಎಂ**

ತಾವು ಏನಾದರೂ ಹಣವನ್ನು ನಮ್ಮ ರಾಜ್ಯಕ್ಕೆ ಕೊಡಬೇಕೆಂದು ಮನವಿ ಮಾಡಿದ್ದಾರೆ ಅವರು ಸಮಕ್ಷಮ ಭೇಟಿಯಾಗಿ ವರದಿ ಸಲ್ಲಿಸಿದ್ದಾರೆ. ಇದರ ಬಗ್ಗೆ ನಿಗಾವಹಿಸಿ ಏನಾದರೂ ಸಹಾಯ ಮಾಡಲು ಹೇಳುತ್ತೇನೆಂದು ಆಶ್ವಾಸನೆ ಕೊಟ್ಟಿದ್ದಾರೆ. ಮಾನ್ಯ ಉಪನಾಯಕರಾಗಲಿ, ಚಂದ್ರೇಗೌಡರು ಮೊನೆ ಸಾಕಷ್ಟು ಸಲ ಕೇಳಿದ್ದಿರಿ, ಇಷ್ಟು ಮನವಿ ಕೊಟ್ಟರೂ ಕೇಂದ್ರದಿಂದ ಇನ್ನೂ ನೆರವು ಬಂದಿಲ್ಲ ಎಂದು ಕೇಂದ್ರದಿಂದನೆರವು ಬರುವ ಬಗ್ಗೆ ಈ ವರ್ಷ ನಮಗೆ ಸ್ವಲ್ಪ ಆಸೆ ಇದೆ. ಪ್ರಧಾನಮಂತ್ರಿಗಳು ಕೂಡ ಈ ಬಗ್ಗೆ ಪರೀಶೀಲಿಸುವುದಾಗಿ ಹೇಳಿದ್ದಾರೆ

ಶ್ರೀ ವಾಟಾಳ್ ನಾಗರಾಜ್ : ಬರೀ ಪರಿಶೀಲನೆ ಆಸೆ ಭರವಸೆ ಆಸೆಯಲ್ಲಿಯೇ ನೀವು ಆಕಾಶ ಕಟ್ಟುತ್ತಿದ್ದೀರಿ, ಸ್ಪಷ್ಟವಾಗಿ ಹೇಳಿ, ಕೇಂದ್ರ ಸರ್ಕಾರದ ಮೇಲೆ ನಿಮಗೆ ಆಸೆ ಇರಬಹುದು ಅಭಿಮಾನ ಇರಬಹುದು, ಆದರೆ ಕೇಂದ್ರದಿಂದ ಬಂದೇ ಬರುತ್ತದೆಯೇ ಎಷ್ಟು ಬರಬಹುದು, ಹಾಗೆ ಬರಲು ಏನೇನು ಮಾಡಿದ್ದೀರಿ ಎಂಬುದನ್ನು ಹೇಳಿ.

ಶ್ರೀ ಧರ್ಮಸಿಂಗ್ : ನಾವು ಕರ್ನಾಟಕದಲ್ಲಿ ನೆರೆಹಾವಳಿ ಬರಗಾಲದಿಂದ ಎಷ್ಟು ಹಾನಿಯಾಗಿದೆ ಎಂಬ ವರದಿಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸುವುದು ಕೇಂದ್ರ ಸರ್ಕಾರಕ್ಕೆ ಕರ್ತವ್ಯ ಅದನ್ನು ಸಲ್ಲಿಸಿದ್ದೇವೆ. ಪ್ರಧಾನಮಂತ್ರಿಗಳು ಕೃಷಿ ಸಚಿವರು ಅರ್ಥಸಚಿವರಿಗೆ ಕೂಡ ಈ ವಿವರಗಳನ್ನು ಸಲ್ಲಿಸಿದ್ದೇವೆ. 1990ರಿಂದ ಇಲ್ಲಿಯವರೆಗೆ ಮನವಿಯನ್ನು ಕೇಂದ್ರಕ್ಕೆ ನಾವು ಸಲ್ಲಿಸುತ್ತಿದ್ದೇವೆ. ಅವರೇನು ಹೇಳುತ್ತಾರೆ ಸಿ.ಆರ್.ಎಫ್ 27.5 ಕೋಟಿ ಇದೆ ಈಗಾಗಲೇ ನಿಗಧಿಮಾಡಿದ್ದೇವೆ. ಅದರ ಹೊರತು ಅತಿರಿಕ್ತ ಹಣ ಕೊಡಲು ಒತ್ತಾಯ ಮಾಡಿದ್ದೇವೆ ಸಿಕ್ಕಬಹುದು ಎಂಬ ಆಸೆ ಅಷ್ಟೇ ಹೇಳಬಹುದು. ರಾಜ್ಯ ಬೊಕ್ಕಸದಿಂದಲೂ ನಾವು ಕೈಕಟ್ಟಿ ಕುಳಿತಿಲ್ಲ. ಇಲ್ಲಿಯೂ ಕೂಡ ಅದಕ್ಕಾಗಿ 12 ಕೋಟಿ ಬಿಡಿಗಡೆ ಮಾಡಿದ್ದೇವೆ ಮತ್ತು ತಕ್ಕ ಕಾರ್ಯಕ್ರಮ ಹಾಕಿಕೊಂಡಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ : ಬರೀ ಕೇಂದ್ರಕ್ಕೆ ಪ್ರಾರ್ಥನೆ ಮನವಿ ಸಲ್ಲಿಸುವುದು ಆಗಿದೆಯೇ ಹೊರತು 90ರಿಂದ ಇಲ್ಲಿಯವರೆಗೂ ಇವರ ಮನವಿಗೆ ಕೇಂದ್ರ ಬೆಲೆ ಕೊಟ್ಟಿಲ್ಲ. ಕಂದಾಯ ಸಚಿವರ ಮೇಲೆ ನನಗೆ ಬಹಳ ಗೌರವ ಇದೆ, ಏಕೆ ಈ ಸದನಲ್ಲಿ ನೀವು ದಾರಿ ತಪ್ಪಿಸಿಕೊಂಡು ಹೋಗುತ್ತಿದ್ದೀರಿ? ಅದು ಒಳ್ಳೆಯದಲ್ಲ, ನೇರ ಹೇಳಿಬಿಡಿ. ಬರುವುದಾದರೆ ಕೇಂದ್ರದಿಂದ ಬರುತ್ತದೆ ಇಲ್ಲ ಎನ್ನಿ ಸುಮ್ಮನೆ ಬರುತ್ತದೆ, ಆಸೆ ಇದೆ, ಅವರಿಗೆ ಅಭಿಮಾನ ಇದೆ ಕೊಡುತ್ತಾ ಇದ್ದಾರೆ ಎಂಬುದರಿಂದ ನಮಗೇನೂ ಅನುಕೂಲವಾಗುವುದಿಲ್ಲ. ನೇರವಾಗಿ ಉತ್ತರ ಕೊಡಿ 90ರಿಂದ ಇಲ್ಲಿಯವರೆಗೆ ಬರದೇ ಇರುವಾಗ ಈಗ ಹೇಗೆ ಬರುತ್ತದೆ. ಹೇಳಿ ಸ್ವಾಮಿ

ಶ್ರೀ ಧರ್ಮಸಿಂಗ್ : ನೇರವಾಗಿ ಹೇಳಬೇಕಾದರೆ 90-92,92-93,93-94ರಲ್ಲಿ ಏನು ಮನವಿ ಸಲ್ಲಿಸಿದ್ದೇವೆ ನಮಗೆ ಹಣಬಂದಿಲ್ಲ. ಅವರು ಹೇಳುವ ಸಿಆರ್ಎಫ್ನಲ್ಲಿ 27.5 ಕೋಟಿಯಿಂದ ಮಾಡಬೇಕೆಂದಿದ್ದಾರೆ. ಈಗ ವಾಟಾಳ್ನಾಗರಾಜ್ರವರಿಗೆ ಇಷ್ಟೇ ಹೇಳಬಯಸುತ್ತೇನೆ. ಈ ಪರಿಶೀಲನೆ ಮಾಡುವ ಎಂಬ ನೇರ ಆಶ್ವಾಸನೆ ಕೊಟ್ಟಿದ್ದಾರೆ, ಸಿಗುವ ಆಸೆ ಕೂಡ ಇದೆ. ಏಕೆಂದರೆ ಪ್ರಧಾನ ಮಂತ್ರಿಗಳು ಮೊನ್ನೆ ಸಾರ್ವಜನಿಕ ಸಭೆಯಲ್ಲಿ ಹೇಳಿದ್ದಾರೆ, ನಾವು ಭೇಟಿಯಾದಾಗ, ಮುಖ್ಯಮಂತ್ರಿಗಳೂ ಕೂಡ ಹೇಳಿದ್ದಾರೆ, ಆದ್ದರಿಂದ ಸಿಗುವ ಭರವಸೆ ಇದೆ.

ಪ್ರಶ್ನೆ ಸಂಖ್ಯೆ 133 - ಶ್ರೀ ಪ್ರತಾಪಚಂದ್ರ ಶೆಟ್ಟಿ

ಶ್ರೀ ಧರ್ಮಸಿಂಗ್ : ಇದು ಗ್ರಾಮೀಣಾಭಿವೃದ್ಧಿ ಇಲಾಖೆಗೆ ಬರುತ್ತದೆ

ಅಧ್ಯಕ್ಷರು : ಈ ಪ್ರಶ್ನೆಗೆ ಕಾಲಾವಕಾಶ ಕೇಳಿದ್ದಾರೆ.

**ವಿಷಯ : ಕನಕಪುರ-ಮುಳುಬಾಗಿಲು ಮುಂತಾದ ಪಟ್ಟಣಗಳಿಗೆ ಕುಡಿಯುವ ನೀರಿನ ಯೋಜನೆ**

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 134(597)

ಶ್ರೀ ಸಿ. ಬೈರೇಗೌಡ (ವೇಮಗಾಲ್) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕನಕಪುರ, ಆನೇಕಲ್ ಹೊಸಕೋಟೆ ಮಾಲೂರು, ಕೋಲಾರ, ಬಂಗಾರಪೇಟೆ,ಮುಳಬಾಗಿಲು ಮುಂತಾದ ಪಟ್ಟಣಗಳಿಗೆ ಕಾವೇರಿ ನದಿಯಿಂದ ನೀರು ಸರಬರಾಜು ಮಾಡುವ ಯೋಜನೆಯ ಅಂದಾಜೊಂದನ್ನು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ತಯಾರಿಸಿರುವುದು ನಿಜವೇ?

ಆ) ಈ ಯೋಜನೆಯನ್ನು ಕಾರ್ಯಗತ ಮಾಡಲು ಸರ್ಕಾರ ತತ್ವಷ ಒಪ್ಪಿರುವುದೆ?